

ಎಡದಿಂದ ಬಲಕ್ಕೆ :

1. ಯೋಚಿಸಿದಂತೆಯೇ ಆಯಿತು, ಅದು ಬೇಡಿ ಪಡೆದದ್ದಲ್ಲ (4)
3. ದಾರುಣ ಸ್ಥಿತಿಯಲ್ಲಿದೆ, ನಮ್ಮ ಭೂಮಿ (3)
4. ಗುರುವಿನಂತೆ ಅಷ್ಟೇ ಅಲ್ಲ, ಆಕರ್ಷಣಾ ಗುಣ ಕೂಡ (3)
6. ನೆಲ ತೋಡಿಸಲು ಹೋದಲ್ಲಿ ಕಂಡದ್ದು ಸುಂದರ ಜಲಪಾತ (4)
7. ಅಪ್ಪ ಅಮ್ಮನ ಪ್ರೀತಿ ಯಾವ ಹೋಲಿಕೆಗೂ ಸಿಗುವಂಥದ್ದಲ್ಲ (4)
9. ಶಾಂತಮ್ಮನ ವಯಸ್ಸು ಇಂದಿಗೆ ನೂರು ಮುಟ್ಟಿತು ! (4)
11. ವರ ಕವಿಯನ್ನು ನೇರ ಭೇಟಿ ಮಾಡಿದಂಥ ಕನಸು (4)
13. ಮುನಿಸಿಕೊಂಡವರಿಗೆ ವಂದನೆ ಮಾಡಿದನೇ ? (4)
15. ಮಹನೀಯನಾದರೂ ಅಕೃತ್ಯ ಮಾಡಿದರೆ ಮರ್ಯಾದೆ ಹೋದೀತು 4)
17. ತೀರ್ಪುಗಾರರ ಗುಂಪಿನಲ್ಲಿ ಒಬ್ಬ ಮಹಾ ಪೆದ್ದ ಇದ್ದಾನೆ (3)
18. ಕಾಲ ಕಾಲಕ್ಕೆ ಎಲ್ಲವನ್ನೂ ಒಮ್ಮೊಮ್ಮೆ ಕದಡು, ಬೆರೆಸು (3)
19. ಕರೆದಾಗಲೆಲ್ಲ ಬರುತ್ತಾನೆ ಲಲಿತ ವಿದ್ಯಾ ಪರಿಣತ (4)

ಮೇಲಿಂದ ಕೆಳಕ್ಕೆ :

1. ಅಣ್ಣತಮ್ಮ ಸೇರಿ ಅಂದವಾಗಿ ಜೋಡಿಸಿಟ್ಟದ್ದು ಹೀಗೆ (3)
2. ತೂಗಲಿ, ಬಿಡಲಿ ; ತಪ್ಪದೇ ತಾಕು (3)
3. ಗಣಪನನ್ನು ಪೂಜಿಸುವಾಗಲೂ ಹಣದೊಡೆಯನನ್ನೇ ನೆನೆಯುವುದೇ ? (3)
5. ತತ್ವವನ್ನು ಅರಿವಾಗಿಸುವ ಕೆಲಸ ಬೇಗ, ಬೇಗ (3)
7. ಅನ್ಯರನ್ನು ಕುರಿತ ಸಮಸ್ಯೆಗಳು ಹಲವಾರು (3)
8. ಕೂರ್ಮವನ್ನು ಹಿಡಿಯಲು ಬಂದದ್ದು ಮೊಸಳೆ ತಾನೇ ? (3)
9. ಮಾಸಾಶನ ಸಿಕ್ಕ ನಂತರವಷ್ಟೇ ಕಷ್ಟ ಪರಿಹಾರ (3)
10. ಗಣ್ಯರನ್ನೆಲ್ಲ ಕರೆಸಿದ್ದು ಅದೆಂಥ ಪಟ್ಟಣಕ್ಕೆ ? (3)
12. ವಾರ್ತಾ ವಾಚನಕ್ಕೆ ತಕ್ಕ ಮಹಿಳೆ ಈಕೆ (3)
14. ಸುಂದರ ಕುಸುಮ ಹೌದು, ಆದರೂ ಬಹಳ ಮಬ್ಬು (3)
15. ಮೂರ್ಖರಂತೆ ವರ್ತಿಸುವುದು ಬಹಳ ಅಪಾಯಕರ (3)
16. ಕಾಣಿಕೆಗಳ ಲೆಕ್ಕಾಚಾರದಲ್ಲಿ ಕಿಂಚಿತ್ತೂ ವ್ಯತ್ಯಾಸವಿಲ್ಲ (3)

### 30-11-2017ರ ಉತ್ತರಗಳು

ಎಡದಿಂದ ಬಲಕ್ಕೆ:

1. ಹಸುಗೂಸು ; 3. ಗಮನ ; 4. ಸ್ವದೇಶ ; 6. ನಟವರ ; 7. ನಿರಂತರ ; 8. ಹಾನಿಕರ ; 10. ಕಡಿವಾಣ ; 12. ಸದುಪಾಯ ; 14. ದಾನವೀರ ; 16. ಸುಮ್ಮಾನ ; 17. ಮರುಳ ; 18. ವನದಾಣ

ಮೇಲಿಂದ ಕೆಳಕ್ಕೆ :

1. ಹನನ ; 2. ಸುಸ್ವರ ; 3. ಗಟ್ಟಿತನ ; 5. ಶಕುನಿ ; 7. ನಿರ್ಣಾಯಕ ; 9. ರತ್ನತ್ರಯ ; 11. ವಾಚಿಸು ; 13. ದುರುಳ ; 14. ದಾನವ ; 15. ರಮಣ

---

## ಪ್ರಶ್ನಾಂಕಣ

# ಆಕಾಶದಲ್ಲಿ 'ಕುದುರೆ ತಲೆ' ಹೇಗೆ?

ಅದು ಅಂತರಿಕ್ಷದ ಒಂದು ಪರಮ ಸೋಜಿಗ. ನಮ್ಮ ಗ್ಯಾಲಕ್ಸಿಯಾದ 'ಕ್ಷೀರ ಪಥ'ದಲ್ಲೇ ಇರುವ, ಬರಿಗಣ್ಣಿಗೇ ಸ್ಪಷ್ಟವಾಗಿ ಗೋಚರವಾಗುವ 'ಮಹಾ ವ್ಯಾಧ' ( ಓರಿಯಾನ್ ) ನಕ್ಷತ್ರ ಪುಂಜದಲ್ಲಿ, ಕಲ್ಪನಾತೀತ ದೈತ್ಯ ಗಾತ್ರದ 'ಕುದುರೆ ತಲೆ'ಯೊಂದಿದೆ ( ಚಿತ್ರ 1, 2 ಮತ್ತು 3 ರಲ್ಲಿ ಗಮನಿಸಿ ). ಮಹಾ ವ್ಯಾಧನ ನಡುಪಟ್ಟಿಯ ಪೂರ್ವದಂಚಿನ ' ಆಲ್ನಿಟಾಕ್' ನಕ್ಷತ್ರದ ದಕ್ಷಿಣಕ್ಕಿರುವ ಈ ಕುದುರೆ ತಲೆಯ ಅಗಲ ಸುಮಾರು ಎರಡು ಜ್ಯೋತಿರ್ವರ್ಷ ; ಅದರ ಎತ್ತರ ನಾಲ್ಕು ಜ್ಯೋತಿರ್ವರ್ಷ ! 1 ಜ್ಯೋತಿರ್ವರ್ಷ ಎಂದರೆ 9500 ಶತ ಕೋಟಿ ಕಿಲೋ ಮೀಟರ್ ಗೆ ಸಮ ಎಂಬುದು ನಿಮಗೂ ಗೊತ್ತಲ್ಲ ?

ಸ್ಪಷ್ಟವಾಗಿಯೇ, ಅಂತರಿಕ್ಷದಲ್ಲಿರುವ 'ಕುದುರೆ ತಲೆ' ಒಂದು ವ್ಯೋಮ ಕಾಯ. ವಾಸ್ತವವಾಗಿ ಅದೊಂದು ' ನೀಹಾರಿಕೆ'. ಮಹಾ ವ್ಯಾಧ ನಕ್ಷತ್ರ ಪುಂಜದಲ್ಲಿರುವ, ಹೊಸ ತಾರೆಗಳ ಜನನ ನೆಲೆಯಾಗಿರುವ, ನಾನಾ ಅನಿಲ ಮಿಶ್ರಿತ ದ್ರವ್ಯದ ಮಹಾನ್ ಮೋಡಗಳ ಸಾಮ್ರಾಜ್ಯಕ್ಕೇ ಕುದುರೆ ತಲೆ ನೀಹಾರಿಕೆಯೂ ಸೇರಿದೆ. ಈ ಬೃಹತ್ ದ್ರವ್ಯ ರಾಶಿಯಲ್ಲಿ ಕನಿಷ್ಠ ಒಂದು ನೂರು ವಿಧ ಅನಿಲಗಳಿವೆ; ಅಪಾರ ಧೂಳು ಕೂಡ ಬೆರೆತಿದೆ. ಈ ಭಾರೀ ದ್ರವ್ಯ ಸಮುಚ್ಚಯದಲ್ಲಿ ಯೋಗಾಯೋಗದಿಂದ ಧೂಳಿನ ಕಣಗಳು ಕುದುರೆಯೊಂದರ ತಲೆಯ ಆಕಾರವನ್ನೇ ಹೋಲುವಂತೆ ದಟ್ಟೈಸಿವೆ . ಪಾರಕವಲ್ಲದ ಈ ಧೂಳಿನಾಕೃತಿ ಅದರ ಹಿಂಬದಿಯ ನಕ್ಷತ್ರಗಳ ಬೆಳಕನ್ನೆಲ್ಲ ಮುಂಬದಿಗೆ ಹರಿಯದಂತೆ ಅಡ್ಡನಾಗಿ ನಿಂತಿದೆ. ಹಾಗಾಗಿ ಉಜ್ವಲ ಬೆಳಕಿನ ಹಿನ್ನೆಲೆಯಲ್ಲಿ ಕಪ್ಪಾದ ಕುದುರೆ ತಲೆಯೊಂದು ಭೂಮಿಗೆ ಗೋಚರಿಸುವಂತಾಗಿದೆ. 19ನೇ ಶತಮಾನದಲ್ಲೇ ಮೊದಲಿಗೆ ಗುರುತಿಸಲಾಗಿದ್ದ ಈ ನೀಹಾರಿಕೆ ಆಗಿನಿಂದಲೇ, ಇದೇ ರೂಪಾನ್ವಯ ಹೆಸರಿನಿಂದಲೇ ಪ್ರಸಿದ್ಧವಾಗಿದೆ. ಕುದುರೆ ತಲೆ ನೀಹಾರಿಕೆಯ ಹಿನ್ನೆಲೆಯ ಪ್ರದೇಶದಲ್ಲಿ ಜಲಜನಕ ಅನಿಲ ಸಾಂದ್ರವಾಗಿ ಹರಡಿಕೊಂಡಿದೆ. ಸನಿಹದ ಉಜ್ವಲ ನಕ್ಷತ್ರ 'ಸಿಗ್ಮಾ ಓರಿಯೋನಿಸ್' ನ ವಿಕಿರಣಗಳಿಂದ ಆ ಜಲಜನಕ ರಾಶಿಯ ಪರಮಾಣುಗಳು ಅಯಾನೀಕರಣಗೊಳ್ಳುತ್ತಿವೆ. ಆ ಕಾರಣದಿಂದ ಕುದುರೆ ತಲೆ ನೀಹಾರಿಕೆಯ ಹಿನ್ನೆಲೆ ಸಮೃದ್ಧ ಗುಲಾಬಿ ವರ್ಣದಿಂದ ಕಂಗೊಳಿಸುತ್ತಿದೆ.




ಈ ನೀಹಾರಿಕೆಯಲ್ಲಿ ಹೊಸ ಹೊಸ ತಾರೆಗಳು ಹುಟ್ಟುತ್ತಿವೆ ಕೂಡ. ವಿಶೇಷ ಏನೆಂದರೆ, ಇಲ್ಲಿ ಮೈದಳೆಯುತ್ತಿರುವ ತಾರೆಗಳೆಲ್ಲ ಕಡಿಮೆ ದ್ರವ್ಯರಾಶಿಯ ಸಾಧಾರಣ ಕಾಯಗಳು. ಹಾಗೆ ಜನ್ಮ ತಳೆಯುತ್ತಿರುವ ಹಲವಾರು ತಾರೆಗಳು ಕುದುರೆ ತಲೆ ನೀಹಾರಿಕೆಯ ಪ್ರದೇಶದಲ್ಲಿ ಕಾಂತಿ ಯುಕ್ತ ಚುಕ್ಕಿಗಳಂತೆ ಗೋಚರಿಸುತ್ತಿರುವುದನ್ನ ಚಿತ್ರ 2 ಮತ್ತು ಚಿತ್ರ3 ರಲ್ಲಿ ಗಮನಿಸಿ.

ವಿಪರ್ಯಾಸ ಏನೆಂದರೆ, ಇಷ್ಟೆಲ್ಲ ವಿಸ್ಮಯಕರವಾಗಿರುವ 'ಕುದುರೆ ತಲೆ ನೀಹಾರಿಕೆ' ನಮ್ಮಿಂದ 1500 ಜ್ಯೋತಿರ್ವರ್ಷ ದೂರದಲ್ಲಿದೆ. ಹಾಗಾಗಿ ಈ ಅದ್ಭುತ ರೂಪದ ಅಂತರಿಕ್ಷ ನಿರ್ಮಿತಿ ಬರಿಗಣ್ಣಿಗೆ ಗೋಚರವಲ್ಲ ; ಅದನ್ನು ನೇರ ಕಾಣಲು ದೂರದರ್ಶಕದ ನೆರವು ಅನಿವಾರ್ಯ.

■ ಎನ್. ವಾಸುದೇವ್